**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪುಟ್ಟಣ್ಣ ಹಾಗೂ ಶ್ರೀ ಡಿ.ಟಿ. ಶ್ರೀನಿವಾಸ ಇವರು ನಿಯಮ 330ರಡಿ ಪ್ರಸ್ತಾಪಿಸಿರುವ ಸೂಚನೆಗೆ ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಹೇಳಿಕೆ.**

*******

**ಪ್ರಶ್ನೆ:**

**ಕರ್ನಾಟಕ ರಾಜ್ಯದಲ್ಲಿ ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಹಾವುಗಳ ಕಡಿತದಿಂದ ನೂರಾರು ಜನರು ಪ್ರಾಣವನ್ನೇ ಕಳೆದುಕೊಳ್ಳುತ್ತಿದ್ದಾರೆ. ಹಾವುಗಳು ಜನವಸತಿ ಪ್ರದೇಶಗಳಲ್ಲಿ ಕಂಡ ತಕ್ಷಣ ಹಾವು ರಕ್ಷಕರಿಗೆ ಕರೆ ಮಾಡಿದಾಗ ಕೂಡಲೇ ಅವರು ಹಾವು ಇರುವ ಸ್ಥಳಕ್ಕೆ ಬಂದು ತಮ್ಮ ಜೀವವನ್ನು ಲೆಕ್ಕಿಸದೆ ಪ್ರಾಣವನ್ನು ಪಣಕ್ಕಿಟ್ಟು ಹಾವುಗಳನ್ನು ಹಿಡಿದು ಅರಣ್ಯ ಪ್ರದೇಶಗಳಿಗೆ ಬಿಡುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಈ ರೀತಿ ಕೆಲಸ ಮಾಡುವ ಎಲ್ಲ ಹಾವು ರಕ್ಷಕರಿಗೆ ಸರ್ಕಾರದಿಂದ ಅಧಿಕೃತ ಮಾನ್ಯತೆಯಾಗಲಿ, ಗುರುತಿನ ಚೀಟಿಯಾಗಲಿ ಹಾಗು ಹಾವು ಕಡಿತದಿಂದ ಸಾವು ಸಂಭವಿಸಿದಾಗ ಸರ್ಕಾರದಿಂದ ಪರಿಹಾರ ನೀಡುವ ಬಗ್ಗೆ.**

**ಹೇಳಿಕೆ:**

ಅರಣ್ಯ ಇಲಾಖೆಯಲ್ಲಿ ಯಾವುದೇ ಹಾವು ಸಂರಕ್ಷಕರನ್ನು ಪ್ರತ್ಯೇಕವಾಗಿ ನೇಮಿಸಿರುವುದಿಲ್ಲ. ಅರಣ್ಯ ಇಲಾಖೆಯಿಂದ ಮಾನವ-ಹಾವುಗಳ ಸಂಘರ್ಷ, ನಿರ್ವಹಣೆ ಮತ್ತು ಉಪಶಮನ ಕಾರ್ಯಾಚರಣೆಗೆ ಸಂಬಂಧಿಸಿದಂತೆ ಒಂದು ಕೈಪಿಡಿ (SOP) ಹೊರಡಿಸಲಾಗಿದೆ.

ಸದರಿ ಕೈಪಿಡಿಯಲ್ಲಿನ ಮಾರ್ಗಸೂಚಿಯನ್ವಯ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಈಗಾಗಲೇ ಹಾವು ರಕ್ಷಣೆಯಲ್ಲಿ ಗುರುತಿಸಿಕೊಂಡಿರುವ / ಪಾಲ್ಗೊಳ್ಳುತ್ತಿರುವವರಿಗೆ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿ, ತರಬೇತಿಯಲ್ಲಿ ಪಾಲ್ಗೊಂಡವರ ಅರ್ಹತೆ, ಕಾರ್ಯಕ್ಷಮತೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ತೃಪ್ತಿಕರವೆಂದು ಕಂಡುಬಂದಲ್ಲಿ, ಹಾವು ರಕ್ಷಣೆಯಲ್ಲಿ / ಕಾರ್ಯಾಚರಣೆಯಲ್ಲಿ ತೊಡಗಿಸಿಕೊಳ್ಳುವ ಸಲುವಾಗಿ, ಅಂತಹವರಿಂದ ದೃಢೀಕರಣ (Due Undertaking) ಪಡೆದು, ಪ್ರಮಾಣೀಕರಿಸುವಂತೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಹಾಗೂ ಮುಖ್ಯ ವನ್ಯಜೀವಿ ಪರಿಪಾಲಕರು, ಇವರ ದಿನಾಂಕ: 02.01.2024ರ ಪತ್ರದಲ್ಲಿ ಎಲ್ಲಾ ವೃತ್ತಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. **(ಪ್ರತಿ ಒದಗಿಸಿದೆ).**

ಹಾವು ಕಡಿತಕ್ಕೆ ಒಳಗಾಗಿ ಮೃತಪಟ್ಟಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 49 ಎಂಎಸ್‌ಟಿ 2020(ಇ), ದಿನಾಂಕ 26-08-2020 ರಲ್ಲಿ ಕಂದಾಯ ಇಲಾಖೆಯಿಂದ ಪರಿಹಾರಧನ ಪಾವತಿಸಲಾಗುತ್ತಿದೆ **(ಪ್ರತಿ ಒದಗಿಸಿದೆ).**

ಸಂಖ್ಯೆ: ಅಪಜೀ 74 ಎಫ್‌ಡಬ್ಲ್ಯೂಎಲ್ 2026

(ಈಶ್ವರ ಬಿ. ಖಂಡ್ರೆ)
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

38981/2024

ಪ್ರಮುಅಸಂ/ವಜೀ/ಸಿ-1/ಸಿಆರ್-16/2023-24

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ವನ್ಯಜೀವಿ) ಹಾಗೂ ಮುಖ್ಯ ವನ್ಯಜೀವಿ
ಪರಿಪಾಲಕರು
ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು-03
ದೂರವಾಣಿ: 080-23345846
ಇ-ಮೇಲ್: pccfwl@gmail.com

**ದಿನಾಂಕ: 02-01-2024**

ಇವರಿಗೆ,

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ/ ಅರಣ್ಯ ಸಂರಕ್ಷಣಾಧಿಕಾರಿ,
ಬೆಂಗಳೂರು/ಬೆಳಗಾವಿ/ಬಳ್ಳಾರಿ/ಚಾಮರಾಜನಗರ/ಚಿಕ್ಕಮಗಳೂರು
ಧಾರವಾಡ/ಹಾಸನ/ಕಲಬುರಗಿ/ಕೆನರಾ/ಕೊಡಗು/ಮೈಸೂರು/
ಮಂಗಳೂರು/ಶಿವಮೊಗ್ಗ ವೃತ್ತ ಕಛೇರಿಗಳು

ವಿಷಯ: "ಮಾನವ - ಹಾವುಗಳ ಸಂಘರ್ಷ ನಿರ್ವಹಣೆ ಮತ್ತು ಉಪಶಮನ" ಕಾರ್ಯಾಚರಣೆಯ ಕೈಪಿಡಿಯನ್ನು (SoP) ಅನುಷ್ಠಾನಗೊಳಿಸಿದ್ದು ಈ ಕುರಿತು ವೃತ್ತ ಮಟ್ಟದಲ್ಲಿ ತರಬೇತಿಗಳನ್ನು ಆಯೋಜಿಸಿ ಚಾಲನೆ ನೀಡುವ ಬಗ್ಗೆ

ಉಲ್ಲೇಖ: ಈ ಕಚೇರಿ ಸಮ ಪತ್ರ ಸಂಖ್ಯೆ ದಿನಾಂಕ: 21.06.2022.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಈ ಕಚೇರಿ ಉಲ್ಲೇಖಿತ ಪತ್ರದಲ್ಲಿ "*ಮಾನವ-ಹಾವುಗಳ ಸಂಘರ್ಷ ನಿರ್ವಹಣೆ ಮತ್ತು ಉಪಶಮನ* ಎಂಬ ಕರಡು ಕೈಪಿಡಿಯನ್ನು ಕಳುಹಿಸಲಾಗಿ ನಿಮ್ಮ ವೈಯಕ್ತಿಕ ಗಮನಹರಿಸಿ, ಸದರಿ ಕೈಪಡಿಯಲ್ಲಿನ ಪ್ರತಿ ಅಂಶಗಳನ್ನು ಪರಿಶೀಲಿಸಿ ನಿಮ್ಮ ಅಭಿಪ್ರಾಯ / ಪ್ರತಿಕ್ರಿಯೆಯನ್ನು ಒಂದು ವಾರದೊಳಗೆ ತಪ್ಪದೇ ಈ ಕಚೇರಿಗೆ ಸಲ್ಲಿಸಲು ಸೂಚಿಸಲಾಗಿತ್ತು. ತದನಂತರ ಸದರಿ ಕಾರ್ಯಾಚರಣೆ ಕೈಪಿಡಿಯನ್ನು ಅನುಷ್ಠಾನಗೊಳಿಸಿ, ಪ್ರತಿಯನ್ನು ಇಲಾಖೆಯ ವೆಬ್ಸೈಟ್ (www.aranya.gov.in) ನಲ್ಲಿ ಅಪಲೋಡ್ ಮಾಡಲಾಗಿದ್ದು ನೇರವಾಗಿ ಪಡೆಯಬಹುದಾಗಿರುತ್ತದೆ.

ಮುಂದುವರೆದು, ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಈಗಾಗಲೇ ಉರಗ ರಕ್ಷಣೆಯಲ್ಲಿ ಗುರುತಿಸಿಕೊಂಡಿರುವ / ಪಾಲ್ಗೊಳ್ಳುತ್ತಿರುವ ಅರಣ್ಯ ಸಿಬ್ಬಂದಿ ಮತ್ತು ಇತರ ಉರಗ ಸಂರಕ್ಷಕರಿಗೆ (Snake rescuers / handlers) ಸದರಿ ಕಾರ್ಯಾಚರಣೆಯ ಕೈಪಿಡಿಯಲ್ಲಿನ ಅಂಶಗಳ ಕುರಿತು ಅರಿವು ಮೂಡಿಸುವ ಮತ್ತು ತರಬೇತಿ ನೀಡುವ ಅವಶ್ಯಕತೆ ಇರುತ್ತದೆ. ಆದುದರಿಂದ ಸದರಿ ಕಾರ್ಯಾಚರಣೆಯ ಕೈಪಿಡಿಯಲ್ಲಿನ ಮಾರ್ಗಸೂಚಿಗಳ ಅನ್ವಯ ವೃತ್ತ ಹಾಗೂ ವಿಭಾಗ ಮಟ್ಟದಲ್ಲಿ ತರಬೇತಿ ಏರ್ಪಡಿಸಿ ಸದರಿ ಕೈಪಿಡಿಯಲ್ಲಿರುವ ಅಂಶಗಳ ಕುರಿತಾದ ಸಮಗ್ರ ಮಾಹಿತಿ ಹಾಗೂ ಉರಗ ಸಂರಕ್ಷಣೆಯ ನಿಟ್ಟಿನಲ್ಲಿ ಕೈಪಿಡಿಯಲ್ಲಿರುವಂತೆ ಕೈಗೊಳ್ಳಬೇಕಾದ ಸುರಕ್ಷತಾ ಕ್ರಮಗಳ Do's/ Dont's ಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳಿಗೆ ಚಾಲನೆ ನೀಡುವಂತೆ ಸೂಚಿಸಲಾಗಿದೆ. ಅಲ್ಲದೇ ಸದರಿ ತರಬೇತಿಯಲ್ಲಿ ಪಾಲ್ಗೊಂಡವರ ಅರ್ಹತೆ (credentials) ಹಾಗೂ ತರಬೇತಿ ಕಾರ್ಯಕ್ಷಮತೆ (training performance) ಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ತೃಪ್ತಿಕರವೆಂದು ಕಂಡುಬಂದಲ್ಲಿ ಅವರನ್ನು ನಿಮ್ಮ ಆಡಳಿತ

ವ್ಯಾಪ್ತಿಯಲ್ಲಿನ ಉರಗ ರಕ್ಷಣೆಯಲ್ಲಿ / ಕಾರ್ಯಾಚರಣೆಯಲ್ಲಿ ತೊಡಗಿಸಿಕೊಳ್ಳುವ ಸಲುವಾಗಿ ಅಂತವರಿಂದ ದೃಡೀಕರಣ ಪತ್ರ (due undertaking) ಪಡೆದು ಪ್ರಮಾಣೀಕರಿಸುವಂತೆ (Certify) ತಿಳಿಸಿದೆ ಹಾಗೂ ಈ ಕುರಿತು ಕೈಗೊಂಡ ಕ್ರಮದ ಬಗ್ಗೆ ಅವಶ್ಯ ದಾಖಲಾತಿಗಳೊಂದಿಗೆ ವರದಿ ಸಲ್ಲಿಸುವಂತೆಯೂ ಸೂಚಿಸಿದೆ.

Signed by
Subhash K Malkhede
Date: 11-01-2024 13:14:40

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ)
ಹಾಗೂ ಮುಖ್ಯ ವನ್ಯಜೀವಿ ಪರಿಪಾಲಕರು,
ಕರ್ನಾಟಕ, ಬೆಂಗಳೂರು.

ಪ್ರತಿಯನ್ನು :

1. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಹುಲಿ ಯೋಜನೆ) ಮೈಸೂರು ಇವರಿಗೆ ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
2. ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಪ್ರಾದೇಶಿಕ/ವನ್ಯಜೀವಿ ವಿಭಾಗಗಳು) ಇವರಿಗೆ ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 49 ಎಂಎಸ್‌ಟಿ 2020 (ಇ)

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:26.08.2020

## ಸುತ್ತೋಲೆ

ವಿಷಯ: ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಕ್ಕೆ ಪರಿಹಾರ, ಹಾವು ಕಡಿತಕ್ಕೆ ಪರಿಹಾರ ಹಾಗೂ ಬಣವೆ ನಷ್ಟಕ್ಕೆ ಪರಿಹಾರ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ
1. ಆರ್ಥಿಕ ಇಲಾಖೆಯ ಅ.ಟಿ ಸಂಖ್ಯೆ:ಆಇ 43 ವೆಚ್ಚ-4/2020 ದಿ:19.02.2020
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರ ಅ.ಸ ಪತ್ರ ಸಂ: ಎಜಿಆರ್ ಐ-ಎಎಂಎಲ್/66/2019, ದಿ:07.08.2020.

\.....

೨೦೧೯-೨೦ನೇ ಸಾಲಿಗೆ ಕೃಷಿ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿದ್ದ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಕ್ಕೆ ಪರಿಹಾರ ಧನ, ಹಾವು ಕಡಿತಕ್ಕೆ ಪರಿಹಾರ ಧನ ಹಾಗೂ ಬಣವೆ ನಷ್ಟಕ್ಕೆ ಪರಿಹಾರ ನೀಡುವ ಯೋಜನೆಗಳನ್ನು ಉಲ್ಲೇಖಿತ (1)ರ ಅನಧಿಕೃತ ಟಿಪ್ಪಣಿಯನ್ವಯ 2020-21 ನೇ ಸಾಲಿನಿಂದ ಕಂದಾಯ ಇಲಾಖೆಯಿಂದ ಅನುಷ್ಠಾನಗೊಳಿಸಲು ಆಯವ್ಯಯದಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ.

ಮುಂದುವರೆದು, ಉಲ್ಲೇಖಿತ (2)ರ ಅರೆ ಸರ್ಕಾರಿ ಪತ್ರದಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳು, ಹಾವು ಕಡಿತಕ್ಕೆ ಪರಿಹಾರ, ಬಣವೆ ನಷ್ಟ ಪರಿಹಾರ ಇತ್ಯರ್ಥಗಳನ್ನು ರೈತ ಕುಟುಂಬದವರಿಗೆ ಕಂದಾಯ ಇಲಾಖೆಯ ಉಪವಿಭಾಗಾಧಿಕಾರಿಗಳ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗುತ್ತದೆ. ರೈತ ಕುಟುಂಬದವರಿಗೆ ಉಪವಿಭಾಗಾಧಿಕಾರಿಗಳ ಸಮಿತಿಯ ತೀರ್ಪು ಸಮಂಜಸವೆನಿಸದಿದ್ದಲ್ಲಿ, ಜಿಲ್ಲಾಧಿಕಾರಿಗಳು ಮೇಲ್ಮನವಿ ಪ್ರಾಧಿಕಾರವಾಗಿರುತ್ತಾರೆ. ಆದ್ದರಿಂದ, ಸದರಿ ಯೋಜನೆಯನ್ನು ಕಂದಾಯ ಇಲಾಖೆಯಡಿ ನಿರ್ವಹಿಸುವುದು ಸೂಕ್ತವಾಗಿದ್ದು, ಕಂದಾಯ ಇಲಾಖೆಯಲ್ಲಿ ಪಿ.ಡಿ ಖಾತೆಯಿಂದ ಹಣ ಸೆಳೆದು ಸಕಾಲದಲ್ಲಿ ಪರಿಹಾರ ಧನ ಪಾವತಿಸಲು ಅವಕಾಶವಿರುವುದರಿಂದ ಸದರಿ ಯೋಜನೆಗಳನ್ನು ಕಂದಾಯ ಇಲಾಖೆಯ ವತಿಯಿಂದ ಅನುಷ್ಠಾನಗೊಳಿಸಲು ತೀರ್ಮಾನಿಸಲಾಗಿರುತ್ತದೆ ಹಾಗೂ 2020-21 ನೇ ಸಾಲಿಗೆ ಈ ಯೋಜನೆಗಳಿಗೆ ಕಂದಾಯ ಇಲಾಖೆಯ ಲೆಕ್ಕಶೀರ್ಷಿಕೆ 2235-60-102-1-0-08-100ರಡಿ ಅನುದಾನವನ್ನು ಒದಗಿಸಲಾಗಿರುತ್ತದೆ.

ಆದ್ದರಿಂದ, ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಕ್ಕೆ ಪರಿಹಾರ, ಹಾವು ಕಡಿತಕ್ಕೆ ಪರಿಹಾರ ಹಾಗೂ ಬಣವೆ ನಷ್ಟಕ್ಕೆ ಪರಿಹಾರವನ್ನು ಸರ್ಕಾರದ ಆದೇಶ ಸಂ: ಕೃಇ 57 ಕೃಉಇ 2015 (ಭಾ-1), ದಿನಾಂಕ:11-11-2015 ಮತ್ತು ಸಂ.ಕೃಇ 77 ಕೃಯೋಕಾ 2018, ದಿನಾಂಕ:20-08-2018ರಲ್ಲಿ ನಿಗದಿಪಡಿಸಿರುವಂತೆ ಕ್ರಮವಾಗಿ ರೈತರ ಆತ್ಮಹತ್ಯೆ ಪ್ರಕರಣಕ್ಕೆ ರೂ.5.00 ಲಕ್ಷಗಳ ಪರಿಹಾರವನ್ನು ಮತ್ತು ಹಾವು ಕಡಿತದಿಂದ/ಆಕಸ್ಮಿಕ ಮರಣ ಹೊಂದಿದ ರೈತರ ಹಾಗೂ ಕೃಷಿ ಕಾರ್ಮಿಕರ ಕುಟುಂಬಗಳಿಗೆ ರೂ.2.00 ಲಕ್ಷ ಹಾಗೂ ಬಣವೆ ನಷ್ಟಕ್ಕೆ ರೂ.20,000/-ಗಳನ್ನು ನಿಗದಿಪಡಿಸಿದ್ದು, ಈ ಸಂಬಂಧ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ಮಾರ್ಗಸೂಚಿಗಳನ್ನು ಅನುಸರಿಸಿ ಯಾವುದೇ ಲೋಪಕ್ಕೆ ಎಡೆ ಮಾಡಿಕೊಡದೇ ನಿಗದಿತ ಮಾನದಂಡಗಳನ್ನು ಪಾಲಿಸಿರುವುದನ್ನು ಖಚಿತಪಡಿಸಿಕೊಂಡು ಲೆಕ್ಕಶೀರ್ಷಿಕೆ 2235-60-102-1-0-08-100ರಲ್ಲಿ ಸಕಾಲದಲ್ಲಿ ಪಾವತಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಈ ಮೂಲಕ ಸೂಚಿಸಿದೆ.

(ಜಯಲಕ್ಷ್ಮಿ)
ಸರ್ಕಾರದ ಉಪ ಕಾರ್ಯದರ್ಶಿ,
ಕಂದಾಯ ಇಲಾಖೆ
(ಸೇವೆಗಳು-3, ಬಾ.ನಿ. ಕೆ.ಎ.ಟಿ ಮತ್ತು ಭೂ.ಸು.ಕೋ)

**ಇವರಿಗೆ:**

1. ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಮೈಸೂರು/ಬೆಳಗಾವಿ/ಕಲಬುರಗಿ.
2. ಎಲ್ಲಾ ಜಿಲ್ಲಾಧಿಕಾರಿಗಳು.
3. ನಿರ್ದೇಶಕರು, ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ, ಕಂದಾಯ ಇಲಾಖೆ.
4. ಎಲ್ಲಾ ಉಪವಿಭಾಗಾಧಿಕಾರಿಗಳು.
5. ಎಲ್ಲಾ ತಹಶೀಲ್ದಾರರು.

**ಪ್ರತಿ ಮಾಹಿತಿಗಾಗಿ**:

1. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ ಬಹುಮಹಡಿ ಕಟ್ಟಡ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಕಂದಾಯ ಇಲಾಖೆ.